# ಬಿಗ್ ಬಾಸ್ ಸಿಕ್ಕರೆ ಬಿಡುವುದುಂಟೆ?

## ಮೇಘಶ್ರೀ

ಕಲರ್ಸ್ ಕನ್ನಡ 'ನಂದಗೋಕುಲ'ದ ಮೀನಾ

■ ರಾಘವೇಂದ್ರ ಕೆ.

◆ **ಬಿಗ್ ಬಾಸ್ ನೋಡ್ತಿದ್ದೀರಾ? ನಿಮಗೆ ಅವಕಾಶ ಸಿಕ್ಕರೆ?**

ಸದ್ಯ ನನಗೆ ನೋಡಲು ಆಗಿಲ್ಲ. ರಿಯಾಲಿಟಿ ಶೋ ಆರಂಭವಾಗುವ ಸಂದರ್ಭಕ್ಕೆ 'ನಂದಗೋಕುಲ' ಚಿತ್ರೀಕರಣದ ಒತ್ತಡದಲ್ಲಿದ್ದೆ. ಈ ಬಾರಿಯ ಸ್ಪರ್ಧಿಗಳನ್ನು ನೋಡಿದಾಗ ಊಹೆಯನ್ನೂ ಮಾಡದ ಅಪರೂಪದ ಪ್ರತಿಭೆಗಳು ಬಂದಿವೆ ಎಂದೆನಿಸಿದೆ. ಆಟಗಾರರು ಹೇಗೆ ಸ್ಪರ್ಧೆಯನ್ನು ಒಡ್ಡುತ್ತಾರೆ ಎನ್ನುವುದನ್ನು ನೋಡುವ ಕುತೂಹಲ ಇದೆ. ವೈಯಕ್ತಿಕವಾಗಿ ನನಗೆ ಅವಕಾಶ ಬಂದರೆ ಖಂಡಿತ ಹೋಗುತ್ತೇನೆ. ಅಂತಹ ಅವಕಾಶವನ್ನು ಬಿಡುವುದುಂಟೆ? ನನಗಿಂತ ನನ್ನ ಪತಿಯನ್ನು ಕಳಿಸಬೇಕು ಎನ್ನುವ ಆಸೆ ಇದೆ. ಮುಂದಿನ ದಿನಗಳಲ್ಲಿ ಅಂತಹ ಅವಕಾಶ ಸಿಗಬಹುದೇ ನೋಡೋಣ.

◆ **'ನಂದಗೋಕುಲ'ವನ್ನು ನೀವು ಹೇಗೆ ಅನುಭವಿಸುತ್ತಿದ್ದೀರಿ?**

ಇದು ನಾಲ್ಕನೇ ಪ್ರಾಜೆಕ್ಟ್. ನಾನು ಧಾರಾವಾಹಿ ನೋಡುವಾಗ ಸುಮಾರು ಸಂದರ್ಭದಲ್ಲಿ ಒಂದೇ ರೀತಿ ಸಾಗುತ್ತಿದೆ ಎಂದು ಅನ್ನಿಸಿದ್ದು ಇದೆ. ಅಲ್ಪ ಸ್ವಲ್ಪ ಬದಲಾವಣೆ ಇದ್ದರೂ ಅಳುಮುಂಜಿ ಪಾತ್ರಕ್ಕೆ ಪರ್ಯಾಯವಾಗಿ ಕ್ರೌರ್ಯದ ಒಂದು ಪಾತ್ರ ಇದ್ದೇ ಇರುತ್ತಿತ್ತು. ಬಹುತೇಕ ಧಾರಾವಾಹಿಗಳಲ್ಲಿ ಕಾಮಿಡಿ ಅನ್ನುವುದು ಸಿಗುತ್ತಲೇ ಇರಲಿಲ್ಲ. 'ನಂದಗೋಕುಲ'ದ ಎಲ್ಲ ಪಾತ್ರಗಳ ಪೋಷಣೆಯನ್ನು ತುಂಬ ಚೆನ್ನಾಗಿ ಮಾಡಿದ್ದಾರೆ. ಒಂದು ಪಾತ್ರ ಇಲ್ಲದಿದ್ದರೂ ಕಥೆ ಮುಂದುವರಿಯುವುದಿಲ್ಲ ಎನ್ನುವಂತೆ ಇದೆ. ತಮಾಷೆಗಂತೂ ಮೋಸ ಇಲ್ಲ. ಮೀನಾ ಪಾತ್ರವೂ ಅದ್ಭುತವಾಗಿದೆ. ಯಾರು ಎಷ್ಟೇ ನೋವು ಮಾಡಿದರೂ ಮರುಕ್ಷಣವೆ ಆಕೆ ಅದನ್ನು ಮರೆತು ಖುಷಿಯಿಂದ ಇರುತ್ತಾಳೆ. ಕಥೆಯೂ ಭಿನ್ನವಾಗಿದೆ. ಅದರಲ್ಲಿ ಮುದ್ದು ಮುದ್ದಾಗಿ ಮೀನಾ ಕಾಣಿಸಿಕೊಳ್ಳುತ್ತಾಳೆ. ಮೀನಾಳಂತಹ ಸೊಸೆ–ಮಗಳು ಸಿಗಬೇಕು ಎಂದು ವೀಕ್ಷಕರು ಅನ್ನುತ್ತಿದ್ದಾರೆ.

◆ **ನಟನಾ ಲೋಕವನ್ನು ಪ್ರವೇಶ ಮಾಡಿದ್ದು ಹೇಗೆ?**

ಅಭಿನಯ ಮಾಡಬೇಕು ಎನ್ನುವ ಉದ್ದೇಶ ಇರಲಿಲ್ಲ. 'ನೀನಾ ನಾನಾ' ಎನ್ನುವ ರಿಯಾಲಿಟಿ ಶೋನಲ್ಲಿ ಭಾಗವಹಿಸಿದ್ದೆ. ಅದು ಚರ್ಚಾ ಸ್ಪರ್ಧೆ. ಅದು ಮುಗಿದ ನಂತರ ಒಬ್ಬರು ಸೀರಿಯಲ್‌ನಲ್ಲಿ ನಟಿಸುವ ಆಸಕ್ತಿ ಇದೆಯಾ ಎಂದು ಕೇಳಿದರು. ಅದಾಗಿಯೇ ಬಂದ ಅವಕಾಶವನ್ನು ಏಕೆ ಬಿಡುವುದು ಎಂದು ಮಾಡುವ ಆಸಕ್ತಿಯನ್ನು ವ್ಯಕ್ತಪಡಿಸಿದೆ. ಆಡಿಷನ್ ಕೊಟ್ಟು ಫೋಟೊ ಕೊಟ್ಟೆ. ಆದರೆ ಅವಕಾಶ ಸಿಗಲಿಲ್ಲ. ನನ್ನ ಇನ್‌ಸ್ಟಾಗ್ರಾಂ ಅಕೌಂಟ್ ನೋಡಿ, ರಿಪ್ಲೇಸ್ ಪಾತ್ರಕ್ಕೆ ಕರೆದರು. ಏನೂ ಗೊತ್ತಿರಲಿಲ್ಲ. ಅದೂ ಡಾನ್ಸರ್ ಪಾತ್ರ. ಶಾಸ್ತ್ರೀಯ ನೃತ್ಯವನ್ನು ಕಲಿತಿದ್ದರಿಂದ ಆ ಅವಕಾಶ ಸಿಕ್ಕಿತ್ತು. ಹದಿನೈದು ವರ್ಷದಿಂದ ಅಭ್ಯಾಸ ಮಾಡುತ್ತಿದ್ದೇನೆ. ನಾಟ್ಯ ಪ್ರೀತಿ ಈ ಕ್ಷೇತ್ರಕ್ಕೆ ಎಳೆದುಕೊಂಡು ತಂದಿದೆ.

◆ **ಸಿನಿಮಾಕ್ಕೆ ಅವಕಾಶ ಸಿಕ್ಕರೆ ಎಂತಹ ಪಾತ್ರ ಬಯಸುತ್ತೀರಿ?**

ಸಿನಿಮಾಕ್ಕೆ ಆಗಲ್ಲ ಎನ್ನುವ ಮಾತೇ ಇಲ್ಲ. ಪಕ್ಕದ ಮನೆ ಹುಡುಗಿಯಂತೆ ಕಾಣಿಸಿಕೊಳ್ಳಲು ಮಜಾ ಇರುತ್ತದೆ. ಅಂತಹ ಪಾತ್ರ ಇದ್ದರೆ ಚಂದ. ಡಾನ್ಸರ್ ಪಾತ್ರ ಆದರೂ ಸರಿ. ಏನೇ ಆದರೂ ಕೌಟುಂಬಿಕ ಕಥೆಯಾಗಿರಬೇಕು. ಖಳನಾಯಕಿಯೇ ಆದರೂ ಅದಕ್ಕೂ ಸೈ. ನಿರ್ದೇಶಕರು ನನ್ನ ಹತ್ತಿರ ಅದನ್ನು ಮಾಡಿಸಲು ಸಿದ್ಧ ಇದ್ದರೆ ಖಂಡಿತ ಅದಕ್ಕೆ ಶ್ರಮ ಹಾಕುವೆ. 'ಅಡಚಣೆಗಾಗಿ ಕ್ಷಮಿಸಿ' ಎಂಬ ಸಿನಿಮಾದಲ್ಲಿ ಒಂದು ಪಾತ್ರವನ್ನು ಮಾಡಿದ್ದೆ. ಅದೇ ನನ್ನ ನಟನಾ ಬದುಕಿನ ಮೊದಲ ಅಧ್ಯಾಯ.

◆ **ಕಿರುತೆರೆಯ ಅನುಭವ ಹೇಗಿತ್ತು?**



ಆರಂಭದಲ್ಲಿ ತುಂಬ ಕಷ್ಟ ಅನ್ನಿಸಿತ್ತು. ವೇದಿಕೆಯಲ್ಲಿ ಬೇಕಾದಷ್ಟು ಹೊತ್ತು ಡಾನ್ಸ್ ಬೇಕಾದರೆ ಮಾಡುವಂತಹ ಹುಡುಗಿ. ನಟನೆಯ ಮೂಲ ಪಾಠವೇ ಗೊತ್ತಿರಲಿಲ್ಲ, ಆದರೂ ಮಾಡಲೇಬೇಕಿತ್ತು. ಕ್ಯಾಮೆರಾ, ಫ್ರೇಮ್ ಒಳಗೆ ನಟಿಸುವ ಜೊತೆ ಡೈಲಾಗ್ ಹೇಳಬೇಕು ಅನ್ನುವುದು ದೊಡ್ಡ ಸವಾಲು. ಆಗೆಲ್ಲ ಎರಡು ವಾಕ್ಯವೂ ನೆನಪಿಟ್ಟುಕೊಳ್ಳಲು ಆಗುವುದಿಲ್ಲ ಎಂದು ಬೈಸಿಕೊಂಡಿದ್ದೆ. ಈ ಸಹವಾಸವೇ ಬೇಡ ಎಂದು ಅನೇಕ ಬಾರಿ ಅಂದುಕೊಂಡಿದ್ದೂ ಇದೆ. ಬೇರೆಯವರಿಗೆ ಸಿಗದ ಅವಕಾಶ ಸಿಕ್ಕಿದೆ ಬಿಡಬಾರದು ಎಂದು ಛಲದಿಂದ ಮಾಡಿದೆ. ಪಾತ್ರವಾಗಿ ಜೀವಿಸಿದರೆ ಮಾತ್ರ ಅದನ್ನು ನಿರ್ವಹಿಸಲು ಸಾಧ್ಯ ಎನ್ನುವ ಸತ್ಯ ಅರ್ಥವಾಗಿದೆ. ಪ್ರತಿ ಪಾತ್ರವೂ ಹೊಸತೇ ಆಗಿರುತ್ತದೆ. ವೃತ್ತಿ ಬದುಕಿನ ಏರಿಳಿತಗಳನ್ನೂ ಕಂಡಿದ್ದೇನೆ. ರಿಪ್ಲೇಸ್ ಪಾತ್ರ ಆದರೂ ಮೊದಲ ಅವಕಾಶದಲ್ಲೇ ನಾಯಕಿ ಆಗಿದ್ದೆ. ಅದು ಮುಗಿದ ನಂತರ ಸಾಕಷ್ಟು ದಿನ ಅವಕಾಶವೇ ಸಿಗಲಿಲ್ಲ. ಎರಡು ವರ್ಷದ ಬಳಿಕ 'ಜೀವ ಹೂವಾಗಿದೆ'ಯಲ್ಲಿ ಸೆಕೆಂಡ್ ಹೀರೊಯಿನ್ ಆದೆ. ಅಲ್ಲಿ ನಟನೆಯನ್ನು ಚೆನ್ನಾಗಿ ಕಲಿಯಲು ಸಾಧ್ಯವಾಯಿತು. ನಂತರ 'ನಾಗಿಣಿ 2' ಮಾಡಿದೆ. ಅದಾದ ಮೇಲೆ ಮತ್ತೆ ಎರಡು ವರ್ಷ ಆಡಿಷನ್ ಕೂಡ ಬರಲಿಲ್ಲ. ಯಾಕೆ ಹೀಗೆ ಅನ್ನುವುದು ಇನ್ನೂ ಅರ್ಥವಾಗಿಲ್ಲ. ಅಷ್ಟರಲ್ಲಿ ಮದುವೆಯೂ ಆಯಿತು. 'ರಾಜ ರಾಣಿ'ಯಲ್ಲಿ ಸ್ಪರ್ಧಿಸುವ ಅವಕಾಶ ನಮಗೆ ಸಿಕ್ಕಿತು. ಅದರಲ್ಲಿ ಗೆಲುವು ಸಾಧಿಸಿದ್ದು ಅದ್ಭುತ ಅನುಭವ ನೀಡಿತು. ಅದಾದ ಮೇಲೆ ಈ ಪಾತ್ರ ಸಿಕ್ಕಿದೆ. ■